Date :10.10.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಜಿ.ಆರ್. ವಕೀಲರಿಂದ –**

ನಾನು ಈ ಕೇಸಿನಲ್ಲಿ 1 ನೇ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಎದುರುದಾರರು ನಮ್ಮ ಮಾಲೀಕತ್ವದ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಾಬ್ತು ಪರಿಹಾರ ಕಡಿಮೆ ಇರುವುದೆಂದು ಹೇಳಿ ನಮ್ಮ ವಕೀಲರ ಮುಖಾಂತರ 1 ನೇ ಎದುರುದಾರರಿಗೆ ಮನವಿ ಪತ್ರ ಸಲ್ಲಿಸಿದ್ದು, ಅದಕ್ಕೆ ಅನುಗುಣವಾಗಿ 1 ನೇ ಎದುರುದಾರರು ದಿಃ 12.09.2023 ರಂದು ಒಂದು ಹಿಂಬರಹವನ್ನು ನಮ್ಮ ವಕೀಲರಿಗೆ ಕಳುಹಿಸಿದ್ದು, ಅದನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–1 ಎಂದು, ದಿಃ 31.01.2019 ರ ರಾಜ್ಯ ಪತ್ರದಲ್ಲಿ ಕಲಂ–11 ರ ನೋಟೀಸ್ ಪ್ರಕಟಣೆಯಾಗಿದ್ದು ಮತ್ತು ಇನ್ನೊಂದು ರಾಜ್ಯ ಪತ್ರದಲ್ಲಿ ಕಲಂ–19(1) ರ ನೋಟಿಫಿಕೇಶನ್ ಪ್ರಕಟಣೆಯಾಗಿದ್ದು, ಅವುಗಳ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–2 ಮತ್ತು 3 ಎಂದು, ದಿಃ 11.10.2021 ರಂದು 1 ನೇ ಎದುರುದಾರರು ಹೊರಡಿಸಿದ ಸಾಮಾನ್ಯ ಐತೀರ್ಪಿನ ನಕಲು ದೃಢೀಕೃತ ಪ್ರತಿ, ಅವಾರ್ಡ ತಃಖ್ತೆಯ ದೃಢೀಕೃತ ಪ್ರತಿ ಹಾಗೂ ದಿಃ 16.04.2022 ರ ದಿನಾಂಕದ 1 ಅವಾರ್ಡ ನೋಟೀಸನ್ನು 1 ನೇ ಎದುರುದಾರರು ನನಗೆ ಮತ್ತು ಇತರರಿಗೆ ಜಂಟಿಯಾಗಿ ನೀಡಿದ್ದು, ಅದರ ನಕಲು ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–4 ರಿಂದ 6 ಎಂದು, ನಮ್ಮ ಮಾಲೀಕತ್ವದ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಾಬ್ತು 1 ನೇ ಎದುರುದಾರರು ನನಗೆ ಪರಿಹಾರ ನೀಡಿದ್ದು, ಆ ಬಗ್ಗೆ ಇರುವ ಓಚರ್ ನಕಲು ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–7 ಎಂದು, ದಿಃ 30.01.2024 ರಂದು 1 ನೇ ಎದುರುದಾರರು ಒಂದು ಪರಿಷ್ಕೃತ ಅವಾರ್ಡ ನೋಟೀಸ್ ಕಳುಹಿಸಿದ್ದು, ಅದನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–8 ಎಂದು, ನನ್ನ ಅಣ್ಣನ ಸೊಸೆಯಾದ ಇಂದ್ರಮ್ಮ ಮತ್ತು ಅವರ ಮಕ್ಕಳು 1 ನೇ ಎದುರುದಾರರಿಂದ ಪರಿಹಾರದ ಹಣ ಪಡೆದಿದ್ದು, ಆ ಬಗ್ಗೆ ಇರುವ ಒಂದು ಓಚರ್ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–9 ಎಂದು, ಹಿರಿಯೂರು ತಾಲ್ಲೂಕು ಕೂನಿಕೆರೆ ಗ್ರಾಮದ ಜಮೀನಿನ ಬಗ್ಗೆ ದಿಃ 23.10.2017 ರಂದು ಒಂದು ನೊಂದಣಿ ಕ್ರಯಪತ್ರ ಆಗಿದ್ದು, ಅದರ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–10 ಎಂದು, ನನ್ನ ಹೆಸರಿಗೆ ಇರುವ ಆಧಾರ್ ಕಾರ್ಡ್ ನೋಟರಿ ಪ್ರತಿ ಹಾಜರುಪಡಿಸಿದ್ದು(ಈ ಹಂತದಲ್ಲಿ ಸಾಕ್ಷಿ ಅದರ ಮೂಲಪ್ರತಿ ಹಾಜರುಪಡಿಸಿದ್ದು, ಅದನ್ನು ನೋಟರಿ ಪ್ರತಿಯೊಂದಿಗೆ ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಗಿದೆ), ಅದನ್ನು ನಿಪಿ–11 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – 1 ನೇ ಎದುರುದಾರ ಪರ ಶ್ರೀ ಡಿ.ಜಿ.ಪಿ. ವಕೀಲರಿಂದ –**

ಅರ್ಜಿಯಲ್ಲಿ ಕಾಣಿಸಿದ ನಮ್ಮ ಮಾಲೀಕತ್ವದ ಜಮೀನು ಖುಷ್ಕಿ ಜಮೀನು ಇರುವುದೆಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಸದರಿ ಜಮೀನಿಗೆ ಮಾರಿಕಣಿವೆ ಡ್ಯಾಂ ನಿಂದ ನೀರು ಬರುವುದೆಂದು ಹೇಳುತ್ತಾರೆ. ಆ ರೀತಿ ಮಾರಿಕಣಿವೆ ಡ್ಯಾಂ ನಿಂದ ಅರ್ಜಿಯಲ್ಲಿ ಕಾಣಿಸಿದ ಜಮೀನುಗಳಿಗೆ ನೀರು ಬರುವುದೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿ. ನಿಮ್ಮ ಜಮೀನು ಇರುವ ಕೂನಿಕೆರೆ ಗ್ರಾಮವು ಹಿರಿಯೂರು ಪಟ್ಟಣದಿಂದ 10 ಕಿಮೀ ದೂರದಲ್ಲಿ ಇರುವುದು ಎಂದು ಸೂಚಿಸಲಾಗಿ, 4 ಕಿಮೀ ದೂರದಲ್ಲಿ ಇರುವುದು ಎಂದು ಸಾಕ್ಷಿ ಹೇಳುತ್ತಾರೆ. ಅರ್ಜಿಯಲ್ಲಿ ಕಾಣಿಸಿದ ಜಮೀನು ರಾ.ಹೆ–48 ರಿಂದ ಅಂದಾಜು 3 ಕಿಮೀ ಅಂತರದಲ್ಲಿ(ಒಳಗೆ) ಇರುವುದೇ ಎಂದು ಕೇಳಲಾಗಿ, ಇಲ್ಲಾ, ಅದು ಸಮೀಪದಲ್ಲಿಯೇ ಇರುವುದೆಂದು ಸಾಕ್ಷಿ ಹೇಳುತ್ತಾರೆ.

2) ಮುಖ್ಯವಿಚಾರಣೆಯಲ್ಲಿ ಕಾಣಿಸಿದಂತೆ ಸ್ವಾಧೀನ ಪಡಿಸಿಕೊಂಡ ನಮ್ಮ ಜಮೀನಿಗೆ ಗಾಯಿತ್ರಿ ಜಲಾಶಯ, ಸುವರ್ಣಮುಖಿ ಜಲಾಶಯ, ಭದ್ರಾ ಮೇಲ್ದಂಡೆ ಯೋಜನೆ ಮತ್ತು ವಾಣಿ ವಿಲಾಸ ಡ್ಯಾಂ ನ ಚಾನಲ್ ನೀರು ಹರಿಯುತ್ತಿದ್ದವೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನೇನು ಹಾಜರುಪಡಿಸಿರುವುದಿಲ್ಲ. ಮುಖ್ಯವಿಚಾರಣೆಯಲ್ಲಿ ಕಾಣಿಸಿದಂತೆ ಸ್ವಾಧೀನ ಪಡಿಸಿಕೊಂಡ ನಮ್ಮ ಜಮೀನಿನ ಅಕ್ಕಪಕ್ಕ ಕೋಳಿ ಫಾರಂ, ಇಟ್ಟಿಗಿ ಫ್ಯಾಕ್ಟರಿ, ಗ್ರೀನ್ ಹೌಸ್ ಮತ್ತು ಅಡಿಕೆ ತೋಟಗಳು ಇರುತ್ತವೆ ಎಂದು ತೋರಿಸಲು ನಾನೇನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಮುಖ್ಯವಿಚಾರಣೆಯ ಕಂಡಿಕೆ 3 ರಲ್ಲಿ ಕಾಣಿಸಿದಂತೆ ಎದುರುದಾರರು ನನ್ನ ಮಾಲೀಕತ್ವದ ಜಮೀನನ್ನು ಸ್ವಾಧೀನ ಪಡಿಸಿಕೊಂಡರು ಎಂದು ಹೇಳಿದ ಸಮಯದಲ್ಲಿ ಆ ಜಮೀನಿನ ಬೆಲೆಯು 1 ಗುಂಟೆಗೆ ರೂ.90,000/– ಇತ್ತೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ.

3) ನಿಮ್ಮ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ಮತ್ತು ಅದೇ ರೀತಿ ನಮ್ಮ ಊರಿನ ಇತರೆ ಜಮೀನುಗಳನ್ನು ಎದುರುದಾರರು ಸ್ವಾಧೀನ ಪಡಿಸಿಕೊಳ್ಳುವ ಮೊದಲು, ಕಂದಾಯ

ಅಧಿಕಾರಿಗಳು ಮತ್ತು ಭೂಸ್ವಾಧೀನ ಅಧಿಕಾರಿಗಳು ಕೂಡಿ ನಿಮ್ಮ ಊರಿನಲ್ಲಿ ಸಭೆ ಮಾಡಿದ್ದರೆಂದು ಸೂಚಿಸಲಾಗಿ, ಇಲ್ಲವೆಂದು ಸಾಕ್ಷಿ ನುಡಿಯುತ್ತಾರೆ. ಮುಖ್ಯವಿಚಾರಣೆಯ ಕಂಡಿಕೆ –7 ರಲ್ಲಿ ಪ್ರತೀ ವರ್ಷ ಜಮೀನುಗಳ ಮಾರುಕಟ್ಟೆ ಬೆಲೆ ವರ್ಷಕ್ಕೆ ಶೇ.20–30 ರಷ್ಟು ಹೆಚ್ಚಿಗೆಯಾಗುವುದೆಂದು ತೋರಿಸಿದ್ದು, ಆ ಬಗ್ಗೆ ತೋರಿಸಲು ನಾನೇನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಅರ್ಜಿಯಲ್ಲಿ ಕಾಣಿಸಿದ ಜಮೀನನ್ನು ಎದುರುದಾರರು ಸ್ವಾಧೀನ ಪಡಿಸಿಕೊಂಡ ಬಾಬ್ತು ಪರಿಹಾರವೆಂದು ನಮಗೆ ರೂ. 6,91,666/– ಹಣ ನೀಡಿರುವರು ಎಂದರೆ ಸರಿ. ಎದುರುದಾರರು ಸ್ವಾಧೀನ ಪಡಿಸಿಕೊಂಡ ಜಮೀನಿನಲ್ಲಿ 2 ಬೇವಿನ ಮರಗಳಿದ್ದು, ಅದರ ಬಾಬ್ತು ಪರಿಹಾರವೆಂದು ಎದುರುದಾರರು ನಮಗೆ ರೂ.4,758/– ಹಣವನ್ನು ಮತ್ತು ಸದರಿ ಜಮೀನಿನಲ್ಲಿ ನಮ್ಮ ಪೂರ್ವಜರ 2 ಸಮಾಧಿ ಇದ್ದು, ಅದರ ಬಾಬ್ತು ಎದುರುದಾರರು ಪರಿಹಾರವೆಂದು ರೂ.13,832/– ಪಾವತಿಸಿರುವರು ಎಂದರೆ ಸರಿ. ಸದರಿ ಪರಿಹಾರದ ಹಣವನ್ನು ನಾವು ತೆಗೆದುಕೊಳ್ಳುವಾಗ ಯಾವುದೇ ತಕರಾರು ಮಾಡದೇ ಒಪ್ಪಿ ಆ ಹಣ ಪಡೆದಿರುವೆವೆಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಅವರು ನೀಡಿದ ಪರಿಹಾರದ ಹಣವು ಸೂಕ್ತ ಇರದೇ ಇದ್ದು, ಅದರಿಂದ ನಾನು ಈ ಅರ್ಜಿಯನ್ನು ಸಲ್ಲಿಸಿರುವೆನೆಂದು ಹೇಳುತ್ತಾರೆ.

4) ನಿಪಿ–10 ಎಂದು ಗುರುತಿಸಿದ ನೊಂದಣಿ ಕ್ರಯ ಪತ್ರದ ಪ್ರತಿಯಲ್ಲಿ ಕಾಣುವ ಜಮೀನು, ಅರ್ಜಿಯಲ್ಲಿ ಕಾಣಿಸಿದ ನಮ್ಮ ಜಮೀನಿನಿಂದ ದೂರದಲ್ಲಿ ಇರುವತ್ತವೆ ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ನಮ್ಮ ಜಮೀನನ್ನು ಎದುರುದಾರರು ಸ್ವಾಧೀನ ಪಡಿಸಿಕೊಳ್ಳುವ ಸಮಯದಲ್ಲಿ ನಮ್ಮ ಸಮಕ್ಷಮವೇ ಸರ್ವೆ ಕೆಲಸ ಮಾಡಿರುವರು ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ನನ್ನ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಸಮಯದಲ್ಲಿ ನನ್ನ ಸಮಕ್ಷಮವೇ ಸರ್ವೆ ಕೆಲಸ ಮಾಡಿದ್ದು, ಆದರೂ ಕೂಡ ನಾನು ಆ ವೇಳೆಗೆ ಹಾಜರಿರಲಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾಲೀಕತ್ವದ ಜಮೀನನ್ನು ಎದುರುದಾರರು ಸ್ವಾಧೀನ ಪಡಿಸಿಕೊಂಡು ಅದರಲ್ಲಿ ರೈಲ್ವೆ ಹಳಿ ಹಾಕುವ ವೇಳೆಯಲ್ಲಿ ನಮಗೆ ಆ ಬಗ್ಗೆ ಮೊದಲೇ ನೋಟೀಸ್ ನೀಡಿದ್ದರು ಎಂದರೆ ಸರಿಯಲ್ಲ.

5) ನಮ್ಮ ಮಾಲೀಕತ್ವದ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ಬಾಬ್ತು ಈಗಾಗಲೇ ಎದುರುದಾರರು ಸೂಕ್ತ ಪರಿಹಾರವೆಂದು ನಮಗೆ ಹಣ ಪಾವತಿಸಿದ್ದು, ಆದರೂ ಕೂಡ ನಾನು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅಂಶದ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುವೆನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ ವಿ.ಡಿ.ಆರ್. ವಕೀಲರ ಪರ ಶ್ರೀ ಜಿ.ಎಂ. ವಕೀಲರಿಂದಃ**

ವಕೀಲರು ಹಾಜರಿದ್ದು, 1 ನೇ ಎದುರುದಾರರ ಪರ ವಕೀಲರು ಮೇಲೆ ಹೇಳಿದಂತೆ ಮಾಡಿದ ಪಾಟೀ ಸವಾಲನ್ನು 3 ನೇ ಎದುರುದಾರರ ಪರ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.